## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.1087/2021

| | | |
|---|---|---|
| ಸಾಕ್ಷಿದಾರರ ಹೆಸರು | - ಘನಿಖಾನ್ | ಸಿಡಬ್ಲ್ಯೂ-1 |
| ತಂದೆಯ ಹೆಸರು | - ಸಲ್ಲೇಖಾನ್ | ಪಿಡಬ್ಲ್ಯೂ-2 |
| ವಯಸ್ಸು | - 29 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ | - ಬಾಡ್‌ಮೇರ್, ರಾಜಸ್ಥಾನ ರಾಜ್ಯ | |

**ದಿನಾಂಕಃ17.04.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ -2 ರಿಂದ 5 ಪರಿಚಯ ಇಲ್ಲ. ನಾನು ದಿನಾಂಕ.01.05.2019 ರಂದು ನಡೆಸುತ್ತಿದ್ದ ಲಾರಿ ಸಂಖ್ಯೆ ಆರ್ ಜೆ -19 ಜಿ ಎಫ್ -2462 ಇದನ್ನು ಬೆಂಗಳೂರಿನಿಂದ ಮಾಲು ತುಂಬಿಕೊಂಡು ರಾಜಸ್ಥಾನದ ಜೋದ್‌ಪುರ್ ಗೆ ರಾ ಹೆ ಮೂಲಕ ಹೋಗುತ್ತಿದ್ದೆ. ಸದರಿ ರಾ. ಹೆ. -04 ರ ಮೇಲೆ ಹಿರಿಯೂರು ಸಮೀಪ ಅಂದರೆ ಐಮಂಗಲದ ಟೋಲ್ ಮುಂಚೆಯೇ ರಸ್ತೆಯಲ್ಲಿ ಹೋಗುತ್ತಿರುವಾಗ ಎದುರಿನಿಂದ ಇನೋವಾ ಕಾರಿನ ಚಾಲಕನು ಬಂದು ವೇಗವಾಗಿ ಬಂದು ನನ್ನ ಲಾರಿಗೆ ಮುಂದಿನಿಂದ ಅಪಘಾತ ಪಡಿಸಿರುತ್ತಾನೆ. ಸಾಕ್ಷಿಯು ಪುನಃ ಹೇಳುತ್ತಾರೆ ಇನೋವಾ ಕಾರು ಸದರಿ ರಸ್ತೆಯ ಬಲ ಬದಿಯಲ್ಲಿ ಹೋಗುತ್ತಿದ್ದಾಗ ಏಕಾ ಏಕಿ ಡಿವೈಡರ್ ಗೆ ಡಿಕ್ಕಿ ಪಡಿಸಿ ನಮ್ಮ ಲಾರಿ ಹೋಗುತ್ತಿದ್ದ ಎಡ ಬದಿ ರಸ್ತೆಯಲ್ಲಿ ಬಂದು ಅಪಘಾತ ಪಡಿಸಿದೆ. ಆ ಸಮಯ ಮಧ್ಯಾಹ್ನ ಸುಮಾರು 03-00 ರಿಂದ 04-00 ಗಂಟೆ ಯಾಗಿರಬಹುದು. ಇನೋವಾ ವಾಹನದ ಸಂಖ್ಯೆಕೆಎ -03 ಎಂ ಜೆ -2465 ಆಗಿರುತ್ತದೆ. ಸದರಿ ಅಪಘಾತದಲ್ಲಿ ಒಟ್ಟು 5 ಜನ ಮೃತಪಟ್ಟಿದ್ದು ಇತರರಿಗೆ ಗಾಯಗಳಾಗಿರುತ್ತದೆ ಆದರೆ ಅವರೆಲ್ಲರ ಹೆಸರು ನನಗೆ ಗೊತ್ತಿಲ್ಲ. ಸದರಿ ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ ಆದರೆ ನಾನು ಲಾರಿಯನ್ನು ನನ್ನ ಟ್ರ್ಯಾಕ್ ನಲ್ಲೆ

ನಡೆಸಿಕೊಂಡೇ ಹೋಗುತ್ತಿದ್ದೆ. ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಗಳಿಗೆ ಚಿಕಿತ್ಸೆಗಾಗಿ ಯಾರು ಎಲಿ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ಅಪಘಾತದ ಬಗ್ಗೆ ನಾನು ಒಂದು ಲಿಖಿತ ದೂರನ್ನು ಸಲ್ಲಿಸಿದ್ದೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ–2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಯಿತು.

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಿದ್ದು ಅದನ್ನು ನಿಪಿ–3 ಎಂದು ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ನಕಾಶೆಯನ್ನು ತೋರಿಸಿದ್ದು ಅದನ್ನು ನಿಪಿ–4 ಎಂದು ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿದ್ದು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಛಾಯಾ ಚಿತ್ರವನ್ನು ನಿಪಿ–5 ಎಂದು ಗುರುತಿಸಲಾಯಿತು. ಸದರಿ ಛಾಯಾ ಚಿತ್ರವನ್ನು ಘಟನಾ ಸ್ಥಳದಲ್ಲಿ ತೆಗೆಯಲಾಗಿರುತ್ತದೆ. ನಿಪಿ–3 ಮತ್ತು 4 ದಾಖಲೆಗಳಿಗೆ ಅಪಘಾತದ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಅಪಘಾತವಾದ ದಿನವೇ ನಿಪಿ –3 ಮತ್ತು 4 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನಿಪಿ–3 ಮತ್ತು 4 ದಾಖಲೆಗಳಿಗೆ ಅಪಘಾ೦ತದ ಬಗ್ಗೆ ಸಹಿ ಮಾಡಿರುತ್ತೇನೆ. ಆದರೆ ಅವುಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತದ ಸ್ಥಳದಲ್ಲಿ ಪೊಲೀಸರು ಮಹಜರ ಕ್ರಮ ಜರುಗಿಸಿರುತ್ತಾರೆ. ಅಪಘಾತದ ಸ್ಥಳದಿಂದ ಪೊಲೀಸರು ಇನೋವಾ ಕಾರು ಮತ್ತು ನನ್ನ ಲಾರಿಯನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಲಾರಿ ಮಾತ್ತು ಇನೋವಾ ಇರುವ ಎಂಟು ಛಾಯಾ ಚಿತ್ರಗಳನ್ನು ತೋರಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ –6 ರಿಂದ 13 ಎಂದು ಗುರುತಿಸಲಾಯಿತು. ಪೊಲೀಸರು ನಂತರ ನನ್ನನ್ನು ವಿಚಾರಿಸಿಲ್ಲ ಮತ್ತು ಯಾವುದೇ ಹೆಚ್ಚುವರಿ ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ಅಪಘಾತವು ಸಂಜೆ 05-15 ಗಂಟೆಗೆ ಮೇಟಿಕುರ್ಕೆ ಬಳಿ ಇರುವ ಅರಣ್ಯದ ಹತ್ತಿರ ರಾ. ಹೆ. ಯಲ್ಲಿ ಆಗಿರುತ್ತದೆ. ಸದರಿ ಅಪಘಾತವು ಇನೋವಾ ಕಾರ್ ನ ಚಾಲನಕನ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ದಿ.02.05.2019 ರಂದು ಬೆಳಿಗ್ಗೆ 10-00 ರಿಂದ 10-45 ಗಂಟೆ ಸಮಯದಲ್ಲಿ ಪೊಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ ಮತ್ತು ನನ್ನ ಸಹಿ ಪಡೆದಿರುತ್ತಾರೆ ಎಂದರೆ ನಿಜ. ಮಹಜರ್ ಮತ್ತು ಸ್ಥಳ ನಕಾಶೆಯಲ್ಲಿ ನನ್ನ ಜೊತೆ ಚಾಸ-4 ಮತ್ತು 5 ಸಹ ಸಹಿ ಮಾಡಿರುತ್ತಾರೆ ಎಂದರೆ ನಿಜ. ದಿನಾಂಕ.04.05.2019 ರಂದು ಪೊಲೀಸರು ಠಾಣೆಗೆ ನನ್ನನ್ನು ಕರೆಯಿಸಿ ಇನ್ನೊವಾ ಕಾರ್ ಚಾಲಕನ ಹೆಸರು ಪ್ರಕಾಶ್ ಎಂದು ಗೊತ್ತಾದ ಬಗ್ಗೆ ನನ್ನ ಮರು ಹೇಳಿಕೆ ಮಾಡಿಕೊಂಡಿರುತ್ತಾರೆ ಎಂದರೆ ನಿಜ. ಸದರಿ ಇನ್ನೊವಾ ಕಾರ್ ನ ಚಾಲಕನು ಈದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಎಂದರೆ ನನಗೆ ಗೊತ್ತಿಲ್ಲ ಆದರೆ, ಈ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಸಿ.ಕೆ. ವಕೀಲರಿಂದ-ಏನೂ ಇಲ್ಲ.**

.ನಾನು ದಿ.01.05.2019 ರಂದು ಸಂಜೆ ಸಮಯದಲ್ಲಿ ಹಿಂದಿ ಭಾಷ್ಷೆಯಲ್ಲಿ ಅಪಘಾತದ ಬಗ್ಗೆ ದೂರು ಕೊಟ್ಟಿದ್ದೇನೆ ಪೊಲೀಸ್ ಠಾಣೆಯಲ್ಲಿ ಯಾರೋಅದನ್ನು ಬೆರಳಚ್ಚು ಮಾಡಿರುತ್ತಾರೆ. ನಾನು ಹಿಂದಿಯಲ್ಲಿ ಹೇಳಿದ ದೂರು ಯಾರು ಕನ್ನಡದಲ್ಲಿ ಅನುವಾದಿಸಿಲ್ಲ. ನಿಪಿ-2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ನ್ನು ಪೊಲೀಸರು ಬೆರಳಚ್ಚು ಮಾಡಿ ತಯಾರಿಸಿದ್ದರ ಮೇಲೆ ಅವರು ಹೇಳಿದಂತೆ ನಾನು ಸಹಿ ಮಾಡಿದ್ದೇನೆ ಎಂದರೆ ನಿಜ. ಮಹಜರನ್ನು 2 ನೇ ತಾರೀಖಿಗೆ ಮಾಡಲಾಗಿದ್ದು, ಸಮಯ ಗೊತ್ತಿಲ್ಲ. ನಿಪಿ-3 ಮಹಜರನ್ನು ಕನ್ನಡದಲ್ಲಿ ಬರೆದಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಅನ್ನುವುದು ನಿಜ. ನಿಪಿ-3 ರಲ್ಲಿ ಕೇವಲ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಅಪಘಾತದ ಬಗ್ಗೆ ಹೇಳಿದ್ದೇನೆ ಎಂದು ಹೇಳುತ್ತಾರೆ. ನಿಪಿ-3

ಮತ್ತು 4 ದಾಖಲೆಗಳಲ್ಲಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎನ್ನುವುದು ಸುಳ್ಳು, ಸಾಕ್ಷಿಯು ಅಪಘಾತದ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನನ್ನ ಜೊತೆ ಒಬ್ಬ ವ್ಯಕ್ತಿ ಸಹಿ ಮಾಡಿದ್ದು, ಆತ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಬರೆದಿಲ್ಲ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಸ್ಥಳ ನಕಾಶೆ ಮತ್ತು ಸ್ಥಳ ಮಹಜರ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಅಪಘಾತಕ್ಕೊಳಗಾಗಿರುವ ಯಾವುದೇ ವಾಹನ ಇರುವುದಿಲ್ಲ ಎನ್ನುವುದು ನಿಜ. ನಿಪಿ-6 ರಿಂದ 13 ಎಲ್ಲಾ ಛಾಯಾ ಚಿತ್ರಗಳು ಪೊಲೀಸ್ ಠಾಣೆಯಲ್ಲಿ ತೆಗೆಯಲಾಗಿದೆ ಎನ್ನುವುದು ನಿಜ.

ದಿ.04.05.2019 ರಂದು ನನ್ನ ಲಾರಿಯನ್ನು ಠಾಣೆ ಯಿಂದ ಬಿಡಿಸಿಕೊಂಡು ಹೋಗಿರುತ್ತೇನೆ. ನನಗೆ ಅಪಘಾತದ ಬಗ್ಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಕೇವಲ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ಹಿಂದಿ ಭಾಷೆ ಯಲ್ಲಿ ವಿಚಾರಣೆ ನಡೆದಿದ್ದು ಶ್ರೀ ಎಸ್ ಎಂ ಆರ್ ವಕೀಲರ ಸಹಾಯದೊಂದಿಗೆ ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು